## 1 ನೇ ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು

## ಜೆ.ಎಂ.ಎಫ್.ಸಿ. ನ್ಯಾಯಾಲಯ, ಹುಬ್ಬಳ್ಳಿ

**MVC** 577/2024 **PW** -1

**ದಿಃ08.01.2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋದಿಸಲಾಯಿತು.**

**ಪಾಟೀ ಸವಾಲುಃ 2 ನೇ ಎದುರುದಾರ ಪರ ವಕೀಲರಾದ ಶ್ರೀ ಎ ಎಂ ಎಸ ರವರಿಂದಃ**

ನನ್ನ ಖುದ್ದ ಊರು ಕೊಂಡಬಿ ಮುಂಡಗೋಡ ತಾಲೂಕ. ನನ್ನ ತಂದೆಯವರು ನಾವು ಎಲ್ಲರೂ ಕೊಡಂಬಿಯಲ್ಲಿಯೇ ವಾಸ ಇದ್ದೇವೆ. ಅಲ್ಲಿ ನಮ್ಮ ಹೊಲ ಇದೆ. ನನ್ನ ತಂದೆಯವರ ಹೆಸರು ಧರ್ಮರಾಜ. ನನ್ನ ತಂದೆಯವರು ಕೂಲಿ ಕೆಲಸವನ್ನು ಕೊಡಂಬಿಯಲ್ಲಿ ಮಾಡುತ್ತಾರೆ. ನನ್ನ ಸ್ವತಃ ಸೈಕಲ್ ಮೋಟರ ಸಂಖ್ಯೆ ಕೆಎಃ31/ಎಲ್ /2868 ಇರುತ್ತದೆ. ಸದರಿ ಸೈಕಲ್ ಮೋಟರಗೆ ಅಪಘಾತವಾಗಿದೆ. ದಿಃ04-06-2024 ರಂದು ನಾನು ಹಾಗೂ ನನ್ನ ತಂದೆಯವರು ಶಿರಸಿಯಿಂದ ಹುಬ್ಬಳ್ಳಿಗೆ ಇದೆ ಬೈಕನಲ್ಲಿ ಬರುತ್ತಿರುವಾಗ ಅಪಘಾತವಾಗಿದೆ. ಸದರಿ ಸೈಕಲ್ ಮೋಟರ ನನ್ನ ಸೈಕಲನ್ನು ನನ್ನ ತಂದೆ ಚಾಲನೆ ಮಾಡುತ್ತಿದ್ದರು.ಕೆಎಃ31/ಎಲ್/2868 ಮೋಟಾರ ಸೈಕಲ್ ರಮೇಶ ಬಸವಣ್ಣೆಪ್ಪ ವಾಲ್ಮೀಕಿ ಎನ್ನುವವರಿಗೆ ಸೇರಿದ್ದು ಎಂದರೆ ಸಾಕ್ಷಿ ಹೌದು ಅವರು ನನ್ನ ಮಾವನಾಗಬೇಕು ಎನ್ನುತ್ತಾರೆ. ಸದರಿ ವಾಹನ ನನ್ನ ತಂದೆಯವರದು ಅಲ್ಲವೆಂದರೆ ಸರಿ. ಸದರಿ ಮೋಟಾರ ಸೈಕಲಗೆ ಅಪಘಾತದ ಸಮಯದಲ್ಲಿ ಆರ್ ಸಿ ಆಯಿತು, ಇನ್ಸೂರನ್ಸ ಆಯಿತು ಇರಲಿಲ್ಲ ಎಂದರೆ ಸಾಕ್ಷಿ ಹೌದು ಇರಲಿಲ್ಲ ಎನ್ನುತ್ತಾರೆ. ಅದೇ ರೀತಿ ಆರ. ಸಿ ಯನ್ನು ರಿನ್ಯೂವಲ್ ಮಾಡಿಸಿಲ್ಲವೆಂದರೆ ಸರಿ. ನಾನು ಈ ಎಲ್ಲ ಮಾಹಿತಿಯನ್ನು ಪೋಲೀಸರಿಗೆ ತಿಳಿಸಿದ್ದೇನೆಂದರೆ ಸರಿ. ಮತ್ತೊಂದು ವಾಹನ ನನಗೆ ಹೊಡೆಯಿತು ಎಂದು ಹೇಳಿದ್ದು ಆ ವಾಹನ ಹುಬ್ಬಳ್ಳಿಯಿಂದ ಶಿರಸಿಗೆ ಹೋಗುತ್ತಿತ್ತು. ನಮಗೆ ಡಿಕ್ಕಿ ಹೊಡೆದ ವಾಹನದ ಸಂಖ್ಯೆ ನನಗೆ ಹೇಳಲು ಆಗುವುದಿಲ್ಲ. ನನ್ನ ತಂದೆ ಕೂಲಿ ಕೆಲಸ ಮಾಡುತ್ತಿದ್ದು ಓದಲು-ಬರೆಯಲು



ಬರುವುದಿಲ್ಲ. ಅಪಘಾತವಾಗಿದೆ ಎಂದು ಹೇಳಲಾದ ಸಮಯ ಪೂರ್ಣ ಕತ್ತಲಾಗಿತ್ತು ಎಂದರೆ ಸರಿ. ಅಪಘಾತ ಮಾಡಿದೆ ಎಂದು ಹೇಳಲಾದ ವಾಹನದಲ್ಲಿ ಇಬ್ಬರು ಇದ್ದರು. ಸದರಿಯವರು ವಾಹನವನ್ನು ಅಪಘಾತವಾದ ನಂತರ ನಿಲ್ಲಿಸಿದ್ದರು ಅಥವಾ ಹಾಗೆಯೆ ಹೋದರು ಎಂದರೆ ಸಾಕ್ಷಿ ಹಾಗೆಯೆ ಹೋದರು ಎನ್ನುತ್ತಾರೆ. ಸದರಿ ಗಾಡಿ ಹೊಡೆದು ಹೋಗಿದ್ದರಿಂದ ನನಗಾಗಲಿ ನನ್ನ ತಂದೆಯವರಿಗಾಗಲಿ ಅದು ಯಾವ ಗಾಡಿ ಎಂಬ ಬಗ್ಗೆ ಮಾಹಿತಿ ಇರಲಿಲ್ಲವೆಂದರೆ ಸರಿ. ಸದರಿ ಸ್ಥಳದಲ್ಲಿ ಬೇರೆ ಯಾರು ಜನ

ಇರಲಿಲ್ಲ ಎಂದರೆ ಸಾಕ್ಷಿ ಇಲ್ಲ ಇರಲಿಲ್ಲ ಎನ್ನುತ್ತಾರೆ. ಸಾಕ್ಷಿ ಮುಂದುವರೆದು ಸ್ಥಳಿಕರು ಇದ್ದರು ಎನ್ನುತ್ತಾರೆ. ಸದರಿ ಸ್ಥಳದಲ್ಲಿ ಇದ್ದ ಸ್ಥಳಿಕರು ಯಾರು ಎಂಬುವುದು ನಿಮಗೆ ಗೊತ್ತಾ ಎಂದರೆ ಸಾಕ್ಷಿ ಗೊತ್ತಿಲ್ಲ ಎನ್ನುತ್ತಾರೆ. ಏಪ್ರಿಲ್ 2023 ನನ್ನದು ಎಸ ಎಸ ಎಲ್ ಸಿ ಮುಗಿದಿದ್ದು ನಾನು 2024 ರಲ್ಲಿ ಪಿಯುಸಿಗೆ ಸೇರಿರುತ್ತೇನೆ. ನಂತರ ನಾನು ಪಾಳಾದಲ್ಲಿರುವ ಐಟಿಐ ಸರ್ಕಾರಿ ಕಾಲೇಜಿಗೆ ಸೇರಿದೇನು. 2 ವರ್ಷದ ಐಟಿಐ ಮುಗಿಸಿರುತ್ತೇನೆ. ಶಾಲೆ ಕಲಿಯುವುದನ್ನು ಬಿಟ್ಟು ನಾನು ಬೇರೆ ಉದ್ಯೋಗ ಮಾಡುತ್ತಿರಲಿಲ್ಲ ಎಂದರೆ ಸಾಕ್ಷಿ ಒಕ್ಕಲುತನ ಮಾಡುತ್ತಿದ್ದೆ ಎನ್ನುತ್ತಾರೆ. ನನ್ನ ತಂದೆಯವರು ಒಕ್ಕಲುತನ ಮಾಡುತ್ತಿರಲ್ಲಿ, ಕೂಲಿ ಕೆಲಸ ಮಾಡುತ್ತಿದ್ದರು ಎಂದರೆ ಸಾಕ್ಷಿ ಹೌದು ಎನ್ನುತ್ತಾರೆ. ನಾನು ಒಕ್ಕಲುತನ ಮಾಡುತ್ತಿದ್ದೆ ಹಾಗೂ ಸುಮಾರು ರೂ.18,000/-ಗಳಿಸುತ್ತಿದ್ದೆ ಎಂದು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. ರೂ.18,000/-ಗಳಿಸುತ್ತಿದ್ದೆ ಎಂದು ತೋರಿಸಲು ದಾಖಲೆ ಏನಾದರೂ ಹಾಜರುಪಡಿಸಿದ್ದೀರಾ ಎಂದರೆ ಸಾಕ್ಷಿ ದಾಖಲೆ ಇಲ್ಲ ಎನ್ನುತ್ತಾರೆ.

ಅಪಘಾತವಾದ ನಂತರ ಮುಂಡಗೋಡ ಸರ್ಕಾರಿ ಆಸ್ಪತ್ರೆಗೆ ನಾನು ಹಾಗೂ ನನ್ನ ತಂದೆಯವರು ಕೂಡಿಯೆ ಹೋಗಿದ್ದೇವು. ನನಗೆ ಅಪಘಾತ ಆಗಿಯೆ ಇಲ್ಲ ನನಗೆ ಮೊದಲೆ ಆದ ಬೇರೆ ಗಾಯಗಳನ್ನು ನಾನು ಒಬ್ಬನೇ ಆಸ್ಪತ್ರೆಗೆ ಹೋಗಿ ತೋರಿಸಿಕೊಂಡು ಬಂದಿದ್ದೇನೆಂದರೆ ಸರಿಯಲ್ಲ.

ಸಾಕ್ಷಿಗೆ ಈ ಹಂತದಲ್ಲಿ ಮುಂಡಗೋಡ ತಾಲೂಕ ಆಸ್ಪತ್ರೆಯ ಗಾಯದ ಪ್ರಮಾಣ ಪತ್ರದ ಜರಾಕ್ಸ ಪ್ರತಿಯನ್ನು ತೋರಿಸಿದಾಗ ಸಾಕ್ಷಿ ಅದನ್ನು ನೋಡಿ ತನ್ನದು ಎಂದು ಒಪ್ಪಿಕೊಳ್ಳುತ್ತಾರೆ. ಸದರಿ ದಾಖಲೆಯನ್ನು ನಿಶಾನೆ ಆರ 1 ಎಂದು ಗುರ್ತಿಸಲಾಯಿತು. ಅದೇ ದಿನ ರಾತ್ರಿ ನನ್ನನ್ನು ಎಸಡಿಎಂ ಆಸ್ಪತ್ರೆ ಧಾರವಾಡಕ್ಕೆ ಕರೆದುಕೊಂಡು ಹೋಗಿರುತ್ತಾರೆ. ಆಗ ಸಮಯ 10 ಗಂಟೆಯಾಗಿತ್ತು. ನಾನು ಹಾಜರುಪಡಿಸಿರುವ ದಾಖಲೆಗಳು ನಿಶಾನೆ ಪಿ



10 ಮತ್ತು ನಿಶಾನೆ ಪಿ 13 ಇವುಗಳು ಸೃಷ್ಟಿ ಮಾಡಿದಂತಹ ದಾಖಲೆಗಳು ಅಂದರೆ ಸರಿಯಲ್ಲ. ನಮಗೆ ಅಪಘಾತವೆ ಆಗಿಲ್ಲ ನಾನು ಮತ್ತು ನನ್ನ ಮಾವ ಸೇರಿ ಒಂದು ಸುಳ್ಳು ಕೇಸು ಹುಟ್ಟಿಸಿ ಗಾಡಿ ಸೃಷ್ಟಿ ಮಾಡಿರುತ್ತೇವೆ ಎಂದರೆ ಸಾಕ್ಷಿ ಸರಿ ಅಲ್ಲ ಎನ್ನುತ್ತಾರೆ. ನಾನು ಔಷಧಕ್ಕಾಗಿ 2 ಲಕ್ಷ್ಯರೂಪಾಯಿ ಖರ್ಚು ಮಾಡಿರುತ್ತೇನೆಂದು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. ನನಗೆ ಯಾವುದೇ ರೀತಿಯ ಗಾಯಗಳು ಆಗಿಲ್ಲ ಮತ್ತು ಅಂಗನ್ಯೂನತೆ ಕೂಡಾ ಇಲ್ಲ ಆದರು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ**

(ನನ್ನ ಉಕ್ತಲೇಖದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)

ಓ ಹೇ ಕೆ ಸರಿ ಇದೆ.

1 ನೇ ಅಧಿಕ ಹಿ.ದಿ.ನ್ಯಾಹುಬ್ಬಳ್ಳಿ